ಕೆಲವು ಅಧಿಕಾರಿಗಳನ್ನು ಸಸ್ಪೆಷನ್‌ನಲ್ಲಿ ಇಟ್ಟಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು, ಎಷ್ಟು ಜನ ಅಧಿಕಾರಿಗಳನ್ನು ಈ ಬಗ್ಗೆ ಸಸ್ಪೆಷನ್‌ನಲ್ಲಿ ಇಟ್ಟಿದ್ದಾರೆ, ಮುಂದೆ ಎಷ್ಟು ಜನಗಳನ್ನು ಸಸ್ಪೆಷನ್‌ನಲ್ಲಿ ಇಡುತ್ತಾರೆ ಎನ್ನುವುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಏನು ಪ್ರಶ್ನೆಯನ್ನು ಎತ್ತಿದ್ದಾರೆ ಈ ಪ್ರಶ್ನೆಗೆ ನಾನೇ ಸೂಕ್ಷ್ಮವಾಗಿ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಅನಾಥರನ್ನು ನೋಡಿಕೊಳ್ಳತಕ್ಕದ್ದು ಸರ್ಕಾರದವರ ಮತ್ತು, ಸಮಾಜದವರ ಕರ್ತವ್ಯ. ತಮೆಲ್ಲರ ಅನುಭವಕ್ಕೆ ಬಂದಿರುವ ಹಾಗೆ ಸಾಮಾಜಿಕ ಭದ್ರತೆ, ಸಾಮಾಜಿಕ ರಕ್ಷಣೆ, ಮತ್ತು ಸಾಮಾಜಿಕ ಸೇವೆಗಳು ಇವು ಮುಂದುವರೆದಂತಹ ರಾಷ್ಟ್ರಗಳಲ್ಲಿ ಎಷ್ಟರ ಮಟ್ಟಿಗೆ ಬೆಳೆದಿದೆ ಎಷ್ಟರ ಮಟ್ಟಿಗೆ ಬೆಳೆದಿಲ್ಲ ಎಂಬುದು ಈಗ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ವೃದ್ಧರು, ಅಂಗವಿಕಲರು, ಮಾನಸಿಕ ರೋಗಕ್ಕೆ ತುತ್ತಾದವರು ಕುರುಡರು, ಕುಂಟರು, ಹೆಳವರು ಮುಂತಾದವರನ್ನು We treat them as veritable jasmin and blossom of our society. ಸರ್ಕಾರದವರು ಅನಾಥರಿಗೆ ಎಂದು ಏನು ಹಣವನ್ನು ಖರ್ಚು ಮಾಡುತ್ತಾರೆ ಅದು ಅನಾನಥರಿಗೆ ತಲಪಬೇಕು ಅದು ದುರುಪಯೋಗವಾಗಕೂಡದು ಈ ಪ್ರಶ್ನೆಯನ್ನು ಎತ್ತಿದಂತಹ ಮಾನ್ಯ ಸದ ್ಯರಿಗೆ ಈ ಬಗ್ಗೆ ಏನು ಖೇದ ಉಂಟಾಗಿದೆ ಮತ್ತು ಯಾವ ಉದ್ದೇಶಕ್ಕಾಗಿ ಈ ಹಣವನ್ನು ಸರ್ಕಾರದವರು ಇಟ್ಟಿದ್ದಾರೆಯೋ ಅದರ ದುರು ಯೋಗ ಎಷ್ಟರ ಮಟ್ಟಿಗೆ ನಡೆದಿದೆ. ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಹಗಲು ದರೋಡೆ ನಡೆದಿದೆ. ಇದರಲ್ಲಿ ತಹಶೀಲ್ದಾರರಿಂದ ಸರ್ಟಿಫಿಕೇಟ್ ತೆಗೆದುಕೊಂಡಿರತಕ್ಕದ್ದು ಕಡಿಮೆ. ತಾಲ್ಲೂಕು ಬೋರ್ಡ್ ಸದಸ್ಯರುಗಳು, ಪಂಚಾಯಿತಿಯ ಅಧ್ಯಕ್ಷರುಗಳು ಮತ್ತು ಗಣ್ಯ ವ್ಯಕ್ತಿಗಳಿಂದ ಸರ್ಟಿಫಿಕೇಟ್ ತೆಗೆದುಕೊಂಡು ಆರ್ಫನ್ ಎಂದು ಹೇಳಿ ವ್ಯವಹರಿಸಿದ್ದಾರೆ, ಎಂದು ಈ ಸಭೆಯ ಸದಸ್ಯರಾದ ಶ್ರೀಮಾನ್ ಗುರುಸಿದ್ದಪ್ಪನವರು ನನ್ನ ಗಮನಕ್ಕೆ ತಂದಿದ್ದಾರೆ. ಮತ್ತು ಈ ಬಗ್ಗೆ ಹಣದ ಲೂಟಿ ಹಗಲು ದರೋಡೆ ನಡೆಯುತ್ತಿದೆ ಇದನ್ನು ಸರಿ ಮಾಡಬೇಕು ಎಂದು ಹೇಳಿದ್ದಾರೆ. ಅದೇ ರೀತಿ ನಾವೂ ಕೂಡ ಈ ಸರ್ಕಾರದ ಆಡಳಿತ ಯಂತ್ರ ಏನಿದೆ ಅದು ಈ ಒಂದು ಕೆಲಸವನ್ನು ಯಾವ ಒಂದು ಪಕ್ಷಪಾತವೂ ಇಲ್ಲದಂತಹ ರೀತಿಯಲ್ಲಿ ಮಾಡಿಸುತ್ತೇವೆ. ಇದರ ಜೊತೆಗೆ ತರ್ಫನೇಜ್ ಗ್ರಾಂಟ್ ಕೊಡತಕ್ಕದ್ದು ಯಾವ ವರ್ಷದಿಂದ ಪ್ರಾರಂಭವಾಗಿದೆ ಯಾರು ಯಾರು ಎಷ್ಟೆಷ್ಟು ಗ್ರಾಂಟುಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನೂ ನೋಡಬೇಕಾಗಿದೆ. ದಿಕ್ಕು ಇಲ್ಲದ ಅನಾಥರು ಎಂದು ಹೇಳಿದ ಮೇಲೆ ಅವರು ಓದಬೇಕಾದರೆ ಬೇಸಿಗೆ ರಜಾದಲ್ಲಿ ಎಲ್ಲಿ ಇರುತ್ತಾರೆ ಎಂಬುದು ಗೊತ್ತಾಗುತ್ತದೆ ಅವರು ಸುಲಭವಾಗಿ ಸಿಕ್ಕಿ ಬೀಳುತ್ತಾರೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನೂ ಕರೆಸಿ ಮಾತನಾಡಿ ಇನ್ನು ಎರಡು ಮೂರು ದಿವಸಗಳಲ್ಲಿ ನ್ಯಾಯಾಂಗೇತರ ಇಲಾಖೆಯ ಅಧಿಕಾರಿಗಳನ್ನೂ ಕರೆದು ಒಂದು ಸಭೆ ನಡೆಸಿ ಈ ಬಗ್ಗೆ ನಾವು ಯಾವ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳ ಬೇಕು ಇದನ್ನೂ ಒಂದು ಪೂಲ್‌ಪ್ರೂಫ್ ಮಾಡಿ ಯಾರೂ ಕೂಡ ಇದನ್ನು ದುರುಪಯೋಗ ಮಾಡದ ರೀತಿಯಲ್ಲಿ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಮಾನ್ಯ ಸಭೆಗೆ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಬಿ. ಸತ್ಯನಾರಾಯಣಸಿಂಗ್ ಅವರ ಗಮನ ಸೆಳೆಯುವ ಸೂಚನೆಯನ್ನು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಒಂದ ಮೇಲೆ ತೆಗೆದುಕೊಳ್ಳಲಾಗುವುದು. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರು ಇವೊತ್ತಿನ ಬೇಡಿಕೆಯ ಮೇಲೆ ತಮ್ಮ ಚರ್ಚೆಯನ್ನು ಪ್ರಾರಂಭ ಮಾಡಬಹುದು.

Strike by Renukacharya College Teachers

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ನಾನು ಒಂದು ವಿಷಯವನ್ನು ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ತರಬೇಕಾಗಿದೆ. ಅದು ಏನೆಂದರೆ ನಿನ್ನೆಯಿಂದ ರೇಣುಕಾಚಾರ್ಯ ಕಾಲೇಜಿನಲ್ಲಿ ಅಧ್ಯಾಪಕರು ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ.... ... ...

ಅಧ್ಯಕ್ಷರು.—ನಾನು ಈಗಾಗಲೇ ಮುಂದಿನ ಕಾರ್ಯಕ್ರಮಕ್ಕೆ ಹೋಗಿದ್ದೇನೆ ಶ್ರೀಮಾನ್ ಬಂಗಾರಪ್ಪನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವಂತೆ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಶ್ರೀಮಾನ್ ಚನ್ನಬಸಪ್ಪನವರ ಬಗ್ಗೆ ಏನು ಪ್ರಸಾಪ್ತ ಮಾಡಿದ್ದಾರೆ ಅದರ ಬಗ್ಗೆ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ

ಅಧ್ಯಕ್ಷರು.—ಮತ್ತೆ ಮಾನ್ಯ ಸದಸ್ಯರು ವಾಪಸ್ಸು ಹೋಗಬೇಡಿ. ನಾನು ಈಗಾಗಲೇ ಮಾನ್ಯ ಸದಸ್ಯರಿಗೆ ಡಿಪ್ಯಾಂಡಿನ ಮೇಲೆ ಮಾತನಾಡಿ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ತಮ್ಮ ಅನುಮತಿ ಪಡೆದು ಒಂದು ವಿಷಯವನ್ನು ಹೇಳ ಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಡಿಮ್ಯಾಂಡಿನ ಬಗ್ಗೆ ಮಾತನಾಡಬಹುದು. ಒಂದು ವೇಳೆ ಅವರಿಗೆ ಮಾತನಾಡುವುದಕ್ಕೆ ಇಷ್ಟವಿಲ್ಲದಿದ್ದರೆ ಬೇರೆಯವರನ್ನು ಕರೆಯುತ್ತೇನೆ.

BUDGET ESTIMATES FOR 1974-75
DEMAND FOR GRANTS

Demand No. 43, 53 and 54 and Debete continued

†ಶ್ರೀ ಎಸ್ ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಸದನದ ಮುಂದೆ ಒಪ್ಪಿಗೆಗಾಗಿ ಮಂಡಿಸಿರತಕ್ಕ ಳಿತ, ಬಿಳಿ ಮತ್ತು ಬಿಳಿ—ಈ ಮೂರು ಬೇಡಿಕೆಗಳನ್ನು ನಾನು ವಿರೋಧಿಸಿ ಮಾತನಾಡಲು ಇಚ್ಛಿಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರು ಮಾತನಾಡುತ್ತಾ ನೀರಾವರಿ ವಿಷಯದಲ್ಲಿ ಕರ್ನಾಟಕ ರಾಜ್ಯಕ್ಕೆ ಯಾವ ರೀತಿ ಅನ್ಯಾಯ ವಾಗಿದೆ, ಕೃಷ್ಣಾ ನೀರಿನ ವಿಷಯದಲ್ಲಿ ಕೇಂದ್ರ ಸರ್ಕಾರ ಪಡೆದಿರತಕ್ಕೆ ಧೋರಣೆ, ನಿಲುವು ಏನಿದೆ, ಯಾವ ರೀತಿ ಅವರಿಂದಲೂ ಅನ್ಯಾಯವಾಗಿದೆಯೆಂಬುದನ್ನು ಬಹಳ ಸೂಕ್ಷ್ಮವಾಗಿ ಪ್ರಸ್ತಾಪಮಾಡಿದ್ದಾರೆ. ನಾನು ಇವತ್ತು ನನ್ನ ಭಾಷಣದಲ್ಲಿ ತಮ್ಮ ಅವಗಾಹನೆಗೆ ತರುವುದಕ್ಕೆ ಇಚ್ಛಿಪಡುವುದೇನೆಂದರೆ, ನೆರೆ ರಾಜ್ಯಗಳಿಗೆ ನಾವು ಹೋಲಿಸಿದಾಗೆಲ್ಲಾ ಹಿಂದೆ ಅನೇಕ ಸಾರಿ ಈ ಪ್ರಶ್ನೆ ಬಂದಾಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ಈ ಸಭೆಯಲ್ಲಿ ಹೇಳಿದರು. ನಮ್ಮ ರಾಜ್ಯದಲ್ಲಿ ನೀರಾವರಿ ಸಂಪತ್ತೆ ನೆರೆ ರಾಜ್ಯಕ್ಕೆ ಹೋಲಿಸಿದಾಗ್ಗೆ ಎಷ್ಟು ಇತ್ತೆಂಬ ವಿಷಯ ಪ್ರಸ್ತಾಪಕ್ಕೆ ಬಂತು. ಇವತ್ತು ನೀರಾವರಿ ಪಿಷಯವನ್ನು ಕುರಿತು ಯೋಚನೆ ಮಾಡುವುದಾದರೆ, ಇದರಲ್ಲಿ ಬೃಹತ್ ನೀರಾವರಿ ಯೋಜನೆಗೆ, ಮಧ್ಯಮ ನೀರಾವರಿ ಯೋಜನೆ ಮತ್ತು ಸಣ್ಣ ನೀರಾವರಿ ಯೋಜನೆ ಮತ್ತು ಸಣ್ಣ ನೀರಾವರಿ ಯೋಜನೆ ಕೂಡ ಬರುತ್ತದೆ. ಇದನ್ನು ನಾವು ಪ್ರತಿವರ್ಷದ ಆಯವ್ಯಯಪತ್ರದಲ್ಲಿಯೂ ಕಾಣುತ್ತಿದ್ದೇವೆ. ಇವತ್ತು ನಮ್ಮ ಆವಯವ್ಯಯ ಪತ್ರದಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ನಾವು ನೀರಾವರಿ ಯೋಜನೆಗಳಿಗೋಸ್ಕರ ತೆಗೆದಿಟ್ಟಿದ್ದೇವೆ ಎನ್ನುವ ಮಾತನ್ನು ತಿಳಿಸಿದ್ದಾರೆ. ನಾನು ಕಳೆದ ಸಾರಿಯೂ ಈ ವಿಷಯವನ್ನು ಪ್ರಸ್ತಾಪಮಾಡಿದ್ದೇನೆ. ಇವತ್ತು ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು ಮಾತನಾಡುತ್ತಾ ಈ ದೇಶದಲ್ಲಿ ಆಹಾರದ ಕೊರತೆ ಭಾರಿ ಪ್ರಮಾಣದಲ್ಲಿ ಏಕೆ ಇದೆಯೆಂದು ಕೇಳಿದರು. ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಪ್ರಮಾಣದಲ್ಲಿ ಎಷ್ಟು ಮಾಡಬೇಕಾಗಿತ್ತೋ ಅಷ್ಟನ್ನು ಈ ಸರ್ಕಾರ ಮಾಡುವುದಕ್ಕೆ ಸಾಧ್ಯವಾಗಲಿಲ್ಲ, ಆ ದೃಷ್ಟಿಯಿಂದ ನಾವು ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಸುವ ವಿಷಯದಲ್ಲಿ ಹೆಚ್ಚಿನ ಕೊರತೆಯನ್ನು ಈಗ ಕಾಣುತ್ತಿದ್ದೇವೆ. ಅಲ್ಲದೆ ಇದು ಎಲ್ಲಾ ದೇಶಕ್ಕೆ ಅನ್ವಯವಾಗತಕ್ಕಂಥಾದ್ದು ಎಂಬ ಮಾತನ್ನು ಅವರು ತಿಳಿಸಿದ್ದಾರೆ. ನಾನು ಭಾವನೆಮಾಡುತ್ತೇನೆ, ಮಾನ್ಯ ಶ್ರೀ ಶಾಮಣ್ಣನವರ ಮಾತಿನಲ್ಲಿ ಸ್ವಲ್ಪ ಮಟ್ಟಿಗೆ ಸತ್ಯಾಂಶವಿದೆಯೆಂಬುದಾಗಿ. ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯಕ್ಕೆ ಸಿಗುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣ ಸಾಲದು. ಇವತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಾಗಿ ಅಂಡರ್‌ಗ್ರೌಂಡ್ ವಾಟರನ್ನು ಟ್ಯಾಪ್ ಮಾಡಬೇಕು. ಸಣ್ಣ ನೀರಾವರಿ ಯೋಜನೆಗಳ ಮಾತು ಬಂದಾಗ್ಗೆ ಕೆರೆಗಳ ಕಟ್ಟೆಗಳ ವಿಷಯ ಬರುತ್ತದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳ ಬೇಕಾಗಿದೆ. ಮಲೆನಾಡಿನ ಭಾಗದಲ್ಲಿರುವ ಕೆಲವು ಜಿಲ್ಲೆಗಳು, ಧಾರವಾಡದ ಅನೇಕ ಭಾಗಗಳು, ಕಾರವಾರ, ಶಿವಮೊಗ್ಗ ದಕ್ಷಿಣ ಕನ್ನಡ ಜಿಲ್ಲೆ, ಹಾಸನ, ಚಿಕ್ಕಮಗಳೂರು, ಕೊಡಗು—ಈ ರೀತಿ ಮೈಸೂರು ಜಿಲ್ಲೆಯ ಅನೇಕ ಭಾಗಗಳು ಮಲೆನಾಡಿನ ಬೆಲ್ಟ್‌ಗೇ ಬರುತ್ತದೆ. ಈ ಜಿಲ್ಲೆಗಳಲ್ಲಿ ಒಂದು ದೊಡ ಅನ್ಯಾಯವಾಗಿದೆ. ಮಾನ್ಯ ಶ್ರೀ ಜನ್ನಬಸಪ್ಪನವರೇ ಅನೇಕ ಸಾರಿ ಒಂದು ಮಾತನ್ನು ತಿಳಿಸಿದ್ದರು. ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರ ಸರ್ಕಾರದಲ್ಲಿಯೇ ಹೇಳುತ್ತಿದ್ದರು. ಅದರ ಬಗ್ಗೆ ನಾವು ಅನೇಕಸಾರಿ ಸರ್ಕಾರಕ್ಕೆ ಒತ್ತಡ ತಂದಿದ್ದೇವೆ. ಅನೇಕ ಕ್ಷೇತ್ರಗಳಲ್ಲಿ ಭಾರೀ ಪ್ರಮಾಣದಮಳೆ ಎಷ್ಟೋ ಸಾರಿ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರವಾದ ಸೊರಬದಲ್ಲಿ ಸರ್ಕಾರದ ಅಂಕಿ